ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 18 ಎಸ್‌ಪಿಎಸ್ (01) 2019

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:17/06/2019

## ಸುತ್ತೋಲೆ

*ವಿಷಯ:* ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳ ದಾಸ್ತಾನುವಹಿಯನ್ನು ಇಲಾಖೆಯ ಇ-ತಂತ್ರಾಂಶ Stock monitoring system ನಲ್ಲಿ ದಾಖಲು ಮಾಡುವ ಬಗ್ಗೆ.

*******

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಇಲಾಖೆಯ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳು ತಮ್ಮ ಉಗ್ರಾಣಗಳ ದಾಸ್ತಾನು ವಹಿ(ಲೆಡ್ಜರ್) ನ್ನು 2007 ರ ನಂತರ ಖರಿದಿಸಲಾದ ಸಾಮಗ್ರಿಗಳ ವಿವರಗಳನ್ನು ಇಲಾಖೆಯು ಸಿದ್ದಪಡಿಸಿರುವ Stock monitoring system ನಲ್ಲಿ ಕಡ್ಡಾಯವಾಗಿ ವರ್ಷವಾರು ತಪ್ಪದೇ ದಾಖಲಿಸಲು ಸೂಚಿಸಲಾಗಿದೆ. ಇನ್ನು ಮುಂದೆ Stock monitoring system ನಲ್ಲಿ ಎಲ್ಲಾ ವಿಭಾಗಗಳ ಲೆಡ್ಜರ್ ಆರ್‌ಆರ್ ನಂ. ದಾಸ್ತಾನುವಹಿಯನ್ನು ತಪ್ಪದೇ ನಿರ್ವಹಿಸುವುದು ಮತ್ತು ತಾವು ಸಲ್ಲಿಸುವ ಖರೀದಿ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಹಿಂದಿನ ಎಲ್ಲಾ ದಾಸ್ತಾನು ನಿರ್ವಹಣೆಯನ್ನು Stock monitoring system ನಲ್ಲಿ ದಾಖಲಿಸಲಾಗಿದೆ ಎಂಬ ಧೃಡಿಕರಣದೊಂದಿಗೆ ಸಲ್ಲಿಸುವುದು ಹಾಗೂ ಸಂಸ್ಥೆಗಳಿಗೆ ಬೇಕಾಗುವ ಸಾಮಗ್ರಿಗಳ/ಯಂತ್ರೋಪಕರಣಗಳ/ಪಿಟೋಪಕರಣಗಳ/ಪುಸ್ತಕಗಳ ಬೇಡಿಕೆಯನ್ನು ತಾವು ದಾಖಲಿಸಿರುವ ದಾಸ್ತಾನು ನಿರ್ವಹಣೆಯ ಆಧಾರದ ಮೇಲೆ ನಿರ್ಧರಿಸಲು ಸಾಧ್ಯವಿರುವುದರಿಂದ ಕಡ್ಡಾಯವಾಗಿ Stock monitoring system ತಂತ್ರಾಶವನ್ನು ಉಪಯೋಗಿಸಲು ಸೂಚಿಸಿದೆ.

**URL: dte.karnataka.gov.in**

ಜಂಟಿನಿರ್ದೇಶಕರು(ಎಟಿಎಸ್)

ಇವರಿಗೆ:-01.ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳ ಮುಂದಿನ ಸೂಕ್ತ ಕ್ರಮಕ್ಕಾಗಿ.

02. ಇ-ಆಡಳಿತ ವಿಭಾಗಕ್ಕೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು.

**ಸೂಚನೆ:-** ಈ ತಂತ್ರಾಂಶವನ್ನು ಉಪಯೋಗಿಸಲು ಬೇಕಾಗಿರುವ ಕೈಪಿಡಿಯನ್ನು ಲಭ್ಯಗೊಳಿಸಲಾಗಿದೆ. ಈ ತಂತ್ರಾಂಶದಲ್ಲಿ Ledger wise reports, Departmentwise reports, equipmentwise reports, ಈ ರೀತಿ ಪಡೆಯಲು ಅವಕಾಶವಿರುತ್ತದೆ. ಸಂಸ್ಥೆಗೆ ಬೇಕಾದ ಹೆಚ್ಚುವರಿ ಉಪಕರಣಗಳನ್ನು ದಾಖಲು ಮಾಡಲು ಅವಕಾಶವಿರುತ್ತದೆ

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080-22256780,**

ಇ-ಮೇಲ್ ವಿಳಾಸ preethi.dte@gmail.com